7. ರೇವಣ್ಣ, ಸದಸ್ಯರು
8. ಪ್ರೊ: ಎಂ. ಡಿ. ನಂಜುಂಡಸ್ವಾಮಿ, ಸದಸ್ಯರು
9. ಈಶ್ವರಪ್ಪ, ಸದಸ್ಯರು
10. ಎಂ. ನಾರಾಯಣಸ್ವಾಮಿ, ಸದಸ್ಯರು
11. ಎಂ. ಎಸ್. ಪಾಟೀಲ್, ಸದಸ್ಯರು

ನಿಯಮ 68ರ ಮೇರೆಗಿನ ಚರ್ಚೆ:-

ಶ್ರೀ ಮಾಟಾಳ್ ನಾಗರಾಜ್:- ಈಗ 6.10 ಗಂಟೆ ಆಗಿದೆ; ಆದ್ದರಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ, ನಾಳೆ ಬೆಳಿಗ್ಗೆ 9.30ಕ್ಕೆ ಸದನ ಸೇರತಕ್ಕದ್ದು ಇದೆ. ಪ್ರಶ್ನೋತ್ತರ ಕಾಲಕ್ಕೆ ಮುಂಚಿತವಾಗಿ ಇವತ್ತು ತಾವು ಏನು ಉತ್ತರಕ್ಕೆ ಅವಕಾಶ ಕೊಟ್ಟಿರಿ ಆ ರೀತಿ ಚರ್ಚೆಗೂ ಅವಕಾಶ ಕೊಟ್ಟು ಅನುಕೂಲ ಮಾಡಿಕೊಡಿ ಎಂದು ಕೇಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಕನಿಷ್ಠ ಎರಡು ಗಂಟೆ ಬೇಕಾಗುತ್ತದೆ. ಬೆಳಿಗ್ಗೆ ಹತ್ತು ಗಂಟೆಗೆ ಬಂದಿರುತ್ತೇವೆ. ಈಗ ಅದರ ಮಹತ್ವ ಬರುವುದಿಲ್ಲ. ನಾಳೆ ಪ್ರಶ್ನೋತ್ತರಕ್ಕೆ ಮುಂಚೆ ತೆಗೆದುಕೊಂಡರೆ ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಕ್ವೆಶ್ಚನ್ ಆವರ್ ಮುಂದೂಡಬೇಕಾಗುತ್ತದಲ್ಲಾ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಕ್ವಶ್ಚನ್ ಅವರ್‌ಗೆ ಮುಂಚೆ ತೆಗೆದುಕೊಂಡು ಆಮೇಲೆ ಕ್ವಶ್ಚನ್ ಅವರ್ ತೆಗೆದುಕೊಳ್ಳಿ.

ಶ್ರೀ ಡಿ. ಕೆ. ಶಿವಕುಮಾರ್:- ನಮ್ಮ ಸಾತನೂರು ಕ್ಷೇತ್ರದಲ್ಲಿ ಕಾಲರಾ ಪ್ರಾರಂಭವಾಗಿ ನಿನ್ನೆಯಿಂದ 3 ಜನ ಸತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ:- ಕ್ವಶ್ಚನ್ ಅವರ ಆದನಂತರ ರೂಲ್ 68 ತೆಗೆದುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಕನಕಪುರ ತಾಲ್ಲೂಕಿನಲ್ಲಿ ಕಾಲರಾ ಆಗಲೇ ಅವರಿಸಿಕೊಂಡಿದ್ದು ಮಂಡ್ಯ ಜಿಲ್ಲೆಯಲ್ಲಿ .....

ಅಧ್ಯಕ್ಷರು:- ಪ್ರಸ್ತಾವನೆ ಮಾಡುವುದಕ್ಕೆ ಬೇಡ ಅನ್ನುವುದಿಲ್ಲ. ಆದರೆ .....

ಶ್ರೀ ಪಿ.ಜಿ. ಆರ್. ಸಿಂಧ್ಯ:- ನಮ್ಮ ಮನಸ್ಸಿನ ನೋವನ್ನು ಅರ್ಥಮಾಡಿಕೊಳ್ಳಿ. ಸರ್ಕಾರದ ಗಮನಕ್ಕೆ ತರುವುದು ಏನೆಂದರೆ ಮೈಸೂರಿನಲ್ಲಿ 250 ಹಳ್ಳಿಗಳಲ್ಲಿ ಕಾಲರಾ ಹರಡಿದ್ದು ಮಂಡ್ಯಕ್ಕೂ ಹರಡಿದೆ. ಕನಕಪುರದಲ್ಲಿ 3 ಜನ ಸತ್ತಿದ್ದಾರೆ. ಮಳವಳ್ಳಿ ಮೂಲಕ ಕನಕಪುರಕ್ಕೆ ಬಂದಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ತಾವು ಏನು ಮಾಡುತ್ತೀರೆಂಬುದನ್ನು ವಿಚಾರ ಮಾಡಿ.

ಶ್ರೀ ಡಿ. ಕೆ. ಶಿವಕುಮಾರ್:- ಆಸ್ಪತ್ರೆಯಲ್ಲಿ ಔಷಧಿ ಇಲ್ಲ, ಕುಡಿಯುವ ನೀರಿಗೆ ಮದ್ದು ಇಲ್ಲ.

ಅಧ್ಯಕ್ಷರು:- ತಾವು ಹೇಳಿದ್ದು ಮೈಸೂರು ಬಗ್ಗೆ ಪ್ರಸ್ತಾವನೆ ಬಂದಿತು. ತಾವು ಹೇಳಿದ್ದಕ್ಕೆ ಎಂದೂ ನಾನು ನಿರಾಕರಣೆ ಮಾಡಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ತಮ್ಮ ಕೊಠಡಿಗೆ ಬೆಳಿಗ್ಗೆ ಹರ್ಷಕುಮಾರ್ ಅವರ ಜೊತೆಯಲ್ಲಿ ಬಂದು ಪತ್ರಿಕೆಗಳನ್ನು ತೋರಿಸಿ ಮೈಸೂರಿನಲ್ಲಿರತಕ್ಕ ವಿಚಾರವನ್ನು ಹೇಳಿದ್ದೇನೆ. ತಾವು ಸಭಾಧ್ಯಕ್ಷರು. ಈ ಸಭೆಗೆ ಕೆಲವು ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ತಾವು, ನಿಯಮಾವಳಿಗಳು, ಅದನ್ನು

ಬಿಟ್ಟು ನಾವು ಒಂದು ಚೂರು ಅಲುಗಾಡುವುದಿಲ್ಲ. ಇದಕ್ಕೆ ನಾವು ಯಾವತ್ತೂ ಸಹ ತಲೆ ಬಾಗುತ್ತೇವೆ. ಆದರೆ ನಮ್ಮ ನೋವನ್ನು ಯಾವುದಾದರೂ ಸಂದರ್ಭದಲ್ಲಿ ವ್ಯಕ್ತಪಡಿಸಲು, ನಾವು ಸದನದ ಸದಸ್ಯರಾಗಿರುವುದರಿಂದ ಎಲ್ಲಿಯಾದರೂ ಅವಕಾಶ ಮಾಡಿಕೊಟ್ಟರೆ ಈ ರೀತಿ ಹೇಳಿಕೊಳ್ಳಬಹುದು ಅಷ್ಟೆ. ಏಕೆಂದರೆ ನಾವು ಶೂನ್ಯವೇಳೆಯ ಸದಸ್ಯರು. ಬಾಕಿ ಯಾವುದಕ್ಕೂ ಅವಕಾಶ ಸಿಕ್ಕದೆ ಇರುವುದರಿಂದ ಶೂನ್ಯ ವೇಳೆಯಲ್ಲಿ, ಇಂಥ ವೇಳೆಯಲ್ಲಿ ಪ್ರಸ್ತಾಪಿಸಬಹುದು. ಏಕೆಂದರೆ 6.15ರ ಮೇಲೆ ಯಾರೂ ಇರುವುದಿಲ್ಲ, ನಮಗೆ ಪ್ರಚಾರ ಸಿಗದಿದ್ದರೂ ಚಿಂತೆ ಇಲ್ಲ, ಜನರ ಸಮಸ್ಯೆ ಬಗೆಹರಿಯಬೇಕು. ಕೋರಂ ಇಲ್ಲದಿದ್ದರೂ ಪರವಾಗಿಲ್ಲ, ಅಂಥ ಸಂದರ್ಭದಲ್ಲಾದರೂ ಅವಕಾಶ ಮಾಡಿಕೊಡಿ ಎಂದು ವಿನಂತಿಸುತ್ತೇನೆ.

ಅಧ್ಯಕ್ಷರು:– ನಿಯಮ 68ರ ಕೆಳಗೆ ಸಾರ್ವಜನಿಕರ ಮಹತ್ವದ ವಿಷಯ ಏನಿದೆ ಇದನ್ನು ಕ್ವೆಶ್ಚನ್ಸ್ ಅವರ್ ಆದನಂತರ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದಕ್ಕೆ ಸದನ ಒಪ್ಪುತ್ತದೆಯೇ ?

(ಸದನ ಒಪ್ಪಿಗೆ ಸೂಚಿಸಿತು)

ಶ್ರೀ ಎನ್. ಜೆ. ನಾಯಕ್:– ಶಾಸಕರು ಸ್ಪಷ್ಟೀಕರಣ ಕೊಡಲಿಕ್ಕೆ ಆಮೇಲೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೀರಿ.

ಅಧ್ಯಕ್ಷರು:– ಆಮೇಲೆ ಕೊಡುತ್ತೇನೆ. ನಾನು ಇನ್ನೂ ಆ ವಿಚಾರದಲ್ಲಿದ್ದೇನೆ. ಈಗ ಸದನದ ಕಲಾಪ ಮುಂದೂಡಿ ನಾಳೆ ಬೆಳಗ್ಗೆ 9.30ಕ್ಕೆ ಸೇರುವುದು.

ಸದನವು 6ಗಂಟೆ 10ನಿಮಿಷಕ್ಕೆ ಮುಕ್ತಾಯವಾಗಿ 12ನೇ ಮಾರ್ಚ್ 1993ರ ಶುಕ್ರವಾರ ಬೆಳಿಗ್ಗೆ 9ಗಂಟೆ 30 ನಿಮಿಷಕ್ಕೆ ಪುನಃ ಸಮಾವೇಶಗೊಳ್ಳುವುದಾಗಿ ತೀರ್ಮಾನವಾಯಿತು.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)